ಮೇಲೆ ಕುಳಿತು ಕವನವೊಂದನ್ನು ಬರೆಯುವ ಸನ್ನಾಹದಲ್ಲಿದ್ದೆ. ಆಗ, ನನ್ನ ಬಲ ಪಾರ್ಶ್ವದ ಕಡೆಯಿಂದ ಯುವತಿಯೊಬ್ಬಳು ದಡದಡನೆ ನಡೆಯುತ್ತ ನಾನಿರುವಲ್ಲಿಗೆ ಬಂದು, ನನ್ನನ್ನು ನೋಡಿ ಗಾಬರಿಗೊಂಡು ಮತ್ತೆ ದಡದಡನೆ ಅಲ್ಲಿಂದ ಮುಂದೆ ಸರಿದಳು. ಅವಳ ಆತಂಕ, ಹಾವಭಾವ ನೋಡಿದರೆ ಖಂಡಿತ ಕೆರೆಗೆ ಹಾರಲು ಬಂದಿರುವವಳೆಂದು ನಾನು ನಿರ್ಣಯಿಸಿದೆ. ತಕ್ಷಣವೆ ಎದ್ದು ನಾನು ಅವಳನ್ನು ಅದೇ ವೇಗದಿಂದ ಹಿಂಬಾಲಿಸಿದೆ. ಅವಳು ಮತ್ತೂ ವೇಗವಾಗಿ ನಡೆಯುತ್ತ, ಕೆರೆ ದಂಡೆಯ ಪಶ್ಚಿಮ ದಿಕ್ಕಿನಲ್ಲಿರುವ ಇನ್ನೊಂದು ಗೇಟಿನ ಮೂಲಕ ಹಾದು, ನಾಪತ್ತೆಯಾದಳು. ಇದೊಂದು ವಿಚಿತ್ರ ಘಟನೆ ಅಂದುಕೊಂಡೆ. ಮತ್ತೆ ಕವನ ಬರೆಯಲು ಆಗಲಿಲ್ಲ. ಹತ್ತಿರದ ಸರಸ್ವತಿಪುರದಲ್ಲಿದ್ದ ರೂಮಿನತ್ತ ನಡೆದೆ. ಇದಾದ ಕೆಲವಾರು ದಿನಗಳ ಬಳಿಕ ಕುಕ್ಕರಹಳ್ಳಿ ಕೆರೆಯಲ್ಲಿ ಹೆಣ್ಣಿನ ಹೆಣವೊಂದು ಸಿಕ್ಕಿತು. ಪತ್ರಿಕೆಯಲ್ಲಿ ಬಂದ ಹೆಣದ ಚಹರೆಯನ್ನು ಗಮನಿಸಿದಾಗ, ಆಕೆಯೇ ಹೌದೆಂದುಕೊಂಡೆ. ಮನಸ್ಸಿಗೆ ತೀವ್ರ ಘಾಸಿಯಾಯಿತು. ಆದರೆ, ನಾನು ಅಸಹಾಯಕನಾಗಿದ್ದೆ. ನನ್ನಿಂದ ಸಾಧ್ಯವಾದುದು ಆ ಘಟನೆಯನ್ನು ಕುರಿತು ವಿಷಾದ ಧ್ವನಿಯ ಕವನವೊಂದನ್ನು ರಚಿಸಲು ಮಾತ್ರ. 'ಅರಳಿ ಬಿರಿಯುವ ಮೊದಲೆ' ಎಂಬುದು ಕವನದ ಶೀರ್ಷಿಕೆ. ಅದರ ಕೊನೆಯ ಸಾಲುಗಳು ಹೀಗಿವೆ: 'ಆಸೆ ಹೂಗಳ ಹೊತ್ತ ಮೊಗ್ಗುಮಲ್ಲಿಗೆ | ಬಿರಿದು ಅರಳುವ ಮೊದಲೆ | ಅರಳಿ ಬಿರಿಯುವ ಮೊದಲೆ | ಊರಕೆರೆ ನಡುವಿನಲಿ ಕೆಂಪುತಾವರೆ ಹಾಗೆ | ತೇಲುತಿರುವುದ ಕಂಡು | ದುಮ್ಮಾನಗೊಂಡು | ಮೆಲ್ಲಗೆ ಕೇಳಿದೆ | ಯಾಕೆ ಮಲಗಿದೆ ಕುಸುಮ | ಕಾಣಲೊಲ್ಲದೆ ಹೋದೆ ಜೀವನದ ಸರಿಗಮ | ಕೆರೆಯ ನಡುವಿರುವ | ಹೆಣಬಿಟ್ಟು ಹೊರಟ ಮನ | ಮೆಲ್ಲಗೆ ಪಿಸುಗುಟ್ಟಿತು | 'ಬಡತನ ಬಡತನ | ನಕ್ಕು ನಲಿಯುವ ಭಾಗ್ಯ ಬಣಬಣ ಬಣಬಣ||' ಹೀಗೆ.

ಕವನ ಬರೆಯುವವರು ಇನ್ನೇನು ತಾನೆ ಮಾಡಲು ಸಾಧ್ಯವಿದೆ? ಇದು ನನಗೆ ಇಂದೂ ಒಂದು ದೊಡ್ಡ ಪ್ರಶ್ನೆಯಾಗಿಯೇ ಉಳಿದಿದೆ. ಆದರೆ, ಈಗಲೂ ಆಗೊಮ್ಮೆ ಈಗೊಮ್ಮೆ ಅಂದಿನ ಘಟನೆ ನನ್ನ ಮನಸ್ಸನ್ನು ಕಿರಿದಾಗಿಯಾದರೂ ಕಾಡುತ್ತಲೇ ಇರುತ್ತದೆ. ಇಂಥ ಅಥವಾ ಈ ಬಗೆಯ ಕೆಲವಾರು ಜೀವನಾನುಭವಗಳನ್ನು ಕುಕ್ಕರಹಳ್ಳಿ ಕೆರೆಯ ಮೂಲಕ ಪಡೆದುಕೊಂಡು, ಮನುಷ್ಯ ಬದುಕಿನ ಇತಿಮಿತಿಗಳನ್ನು ಅರಿತುಕೊಂಡಿದ್ದೇನೆ. ಹಾಗೆಯೇ, ಒಬ್ಬರಿಗೊಂದು ಸಹಾಯ ಮಾಡಲಾರದ ನಾನೆಷ್ಟು ದುರ್ಬಲ ವ್ಯಕ್ತಿತ್ವದವನು ಎಂದು ನನಗೆ ನಾನೇ ಹಲವಾರು ಬಾರಿ ಅಂದುಕೊಂಡಿರುವುದೂ ಉಂಟು. ಮನುಷ್ಯ ಎಷ್ಟು ಸಶಕ್ತನೋ ಅಷ್ಟೇ ದುರ್ಬಲನೂ ಹೌದಲ್ಲ?

ಕುಕ್ಕರಹಳ್ಳಿ ಕೆರೆ ಬಗ್ಗೆ ಬರೆಯುವಾಗ ಸೂಕ್ಷ್ಮವ್ಯಕ್ತಿತ್ವದ, ಅಪ್ಪಟ ಪರಿಸರವಾದಿ ಹೇಮಚಂದ್ರ ಅಕ್ಕಿ, ನನ್ನ ಮತ್ತು ಕೆರೆಯ ಸಂಬಂಧದ ಬಗ್ಗೆ ಬರೆಯದೆ ಹೋದರೆ, ಲೇಖನ ಅಪೂರ್ಣವಾಗುತ್ತದೆ ಎಂದೇ ನನ್ನ ಅನಿಸಿಕೆ. 1980ರ ದಶಕದ ಮಧ್ಯಭಾಗದಲ್ಲಿ ಅಕ್ಕಿ ಅವರಿಗೂ ನನಗೂ ಪರಿಚಯವಾಯಿತು. ಬಿಜಾಪುರ ಜಿಲ್ಲೆಯ ತೊರವಿ ಗ್ರಾಮದವರಾದ ಅಕ್ಕಿ, ಅನಂತರ ಕಲುಬುರ್ಗಿಯಲ್ಲಿ ತಳವೂರಿ, ಬಳಿಕ ಮೈಸೂರಿನಲ್ಲಿ ಕುಟುಂಬ ಸಮೇತರಾಗಿ ನೆಲೆಸಿದರು. ದೈಹಿಕವಾಗಿ ಅಷ್ಟೊಂದು ದಷ್ಟಪುಷ್ಟ ವ್ಯಕ್ತಿ ಆಗಿರದಿದ್ದರೂ ಮಾತುಕತೆಯಲ್ಲಿ ಕರಾರುವಾಕ್ಕು. ಖುಲ್ಲ ಖುಲ್ಲ ವ್ಯಕ್ತಿತ್ವ. ರಾಜಿಮನೋಭಾವದವರಲ್ಲ. ಪಕ್ಷಿ ತಜ್ಞ ಸಲೀಂ ಅಲಿಯ ಅನುಯಾಯಿ. ತಕ್ಕಮಟ್ಟಿಗೆ ಸ್ಥಿತಿವಂತರಾಗಿದ್ದವರು, ಉದಾರವಾದಿಗಳು. ನನಗೂ ಅವರಿಗೂ ಸ್ನೇಹ ಬೆಳೆಯಲು ನಮ್ಮಿಬ್ಬರ ಮನೆಯೂ ಹತ್ತಿರದಲ್ಲಿದ್ದುದೂ ಒಂದು ಕಾರಣವಾಗಿತ್ತೆಂದೇ ಹೇಳಬಹುದು. ಪರಿಸರ ಸಂಬಂಧಿಯಾದ ಕೆಲವು ವಿಷಯಗಳಲ್ಲಿ ನಾವಿಬ್ಬರೂ ಸಮಾನ ಮನಸ್ಕರಾಗಿದ್ದವರು. ಅವರ ಪರಿಸರ ಪ್ರೀತಿಯ ಬಗ್ಗೆ ಸ್ಥಳೀಯ ಪತ್ರಿಕೆಯಲ್ಲಿ ನಾನು ಒಂದು ಲೇಖನ ಬರೆದಿದ್ದೆ ಮತ್ತು ಗೆಳೆಯರೊಬ್ಬರಿಗೆ ಹೇಳಿ ಇನ್ನೊಂದು ಲೇಖನವನ್ನೂ ಬರೆಸಿದ್ದೆ. ನಮ್ಮ ಒಂದು ಯೋಜನೆಯ ಪ್ರಕಾರ ಕುಕ್ಕರಹಳ್ಳಿ ಕೆರೆಯ ಖಾಲಿ ಜಾಗದಲ್ಲಿ ಸ್ಥಳೀಯ ಗಿಡಗಳನ್ನು ಬೆಳೆಸುವುದು